ಬೆಂಗಳೂರು ಸುಭಾಷ್‌ನಗರ ಬಸ್ ನಿಲ್ದಾಣ ನಿರ್ವಹಣೆ.

2507(2125)

ಶ್ರೀ ದಿನೇಶ್ ಗುಂಡುರಾವ್(ಗಾಂಧಿನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರಿನ ಸುಭಾಷ್ ನಗರ ಹಾಗೂ ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ಅದಕ್ಕೆ ಸಂಬಂಧಿಸಿದಂತೆ ಇರುವ ರಸ್ತೆಗಳು ಸಾರ್ವಜನಿಕರ ಉಪಯೋಗಕ್ಕೆ ಅನರ್ಹವಾಗಿರುವುದು ನಿಜವಲ್ಲವೆ?

2) ಈ ಎರಡೂ ನಿಲ್ದಾಣಗಳ ರಸ್ತೆಗಳ ಮರಸ್ತಿ ಕಾಮಗಾರಿಗಳು ಮಹಾನಗರ ಪಾಲಿಕೆ ಹಾಗೂ ಸಾರಿಗೆ ಸಂಸ್ಥೆಯ ಸಮನ್ವಯದ ಕೊರತೆಯಿಂದ ಸ್ಥಗಿತಗೊಂಡಿರುವುದು ನಿಜವಲ್ಲವೆ?

3) ಈ ಎರಡು ಪ್ರದೇಶಗಳಲ್ಲಿ ಅತಿ ಹೆಚ್ಚಿನ ಜನದಟ್ಟಣೆ ಹಾಗೂ ವಾಹನದಟ್ಟಣೆ ಇರುವುದರಿಂದ ಇದರ ಬಗ್ಗೆ ವಿಶೇಷ ಯೋಜನೆ ರೂಪಿಸುವ ಪ್ರಸ್ತಾಪ ಏನಾದರೂ ಸರ್ಕಾರದ ಮುಂದಿದೆಯೆ?

4) ಈ ಪ್ರದೇಶದಲ್ಲಿ ಜಾಹೀರಾತು ಘಟಕಗಳಿಂದ ಹಣ ಸಂಗ್ರಹಿಸಿ ನಿಲ್ದಾಣಗಳ ಅಭಿವೃದ್ಧಿ ಬಳಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

5) ಸುಭಾಷನಗರ ಬಸ್ ನಿಲ್ದಾಣದಲ್ಲಿ ಫ್ಲಾಟ್‌ಫಾರಂ ಟಿಕೇಟ್ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಆಲೋಚಿಸುತ್ತಿದೆಯೆ? ಹಾಗಿದ್ದಲ್ಲಿ ನಿಗದಿಪಡಿಸಲು ಉದ್ದೇಶಿಸಿರುವ ಶುಲ್ಕವೆಷ್ಟು? ಯಾವ ಆಧಾರದ ಮೇಲೆ ಇದನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

1) ನಿಜವಲ್ಲ. ಎರಡೂ ಬಸ್ ನಿಲ್ದಾಣಗಳ ಮಧ್ಯದಲ್ಲಿರುವ ಜೋಡಿ ರಸ್ತೆಗಳ ಪೈಕಿ ಕ.ರಾ.ರ.ಸಾ.ಸಂಸ್ಥೆ ಬದಿಯಲ್ಲಿನ ರಸ್ತೆಯುದ್ದಕ್ಕೂ ಮಳೆ ನೀರು ಸಾಗಿಸುವ ಒಳ ಚರಂಡಿ ಕಲಸ ಹಾಗೂ ಬೆಂ.ಮ.ನ. ಪಾಲಿಕೆಯ ವತಿಯಿಂದ ನಿರ್ಮಿತವಾಗುತ್ತಿರುವ ಪಾದಚಾರಿ ಸುರಂಗ ಮಾರ್ಗದ ಕೆಲಸಗಳು ಪ್ರಗತಿಯಲ್ಲಿರುವುದರಿಂದ ಬಸ್ ನಿಲ್ದಾಣದ ಒಳಗೆ ಬರುವ ವಾಹನಗಳ ಹಾಗೂ ಸಾರ್ವಜನಿಕರಿಗೆ ತಾತ್ಕಾಲಿಕವಾಗಿ ಸ್ವಲ್ಪಮಟ್ಟಿನ ಅಡಚಣೆಯಾಗಿರುತ್ತದೆ.

2) ಎರಡೂ ಬಸ್ ನಿಲ್ದಾಣಗಳ ಆವರಣದಲ್ಲಿ ಬರುವ ರಸ್ತೆಗಳು ಸಂಪೂರ್ಣವಾಗಿ

ಕ.ರಾ.ರ.ಸಾ.ಸಂಸ್ಥೆ ಹಾಗೂ ಬೆಂ.ಮ.ನ.ಸಾ.ಸಂಸ್ಥೆಗಳಿಗೆ ಒಳಪಟ್ಟಿರುತ್ತದೆ. ರಸ್ತೆ ದುರಸ್ತಿ ಕಾಮಗಾರಿಯು ಬೆಂಗಳೂರು ಮಹಾನಗರ ಪಾಲಿಕೆಗೆ ಬರುವುದಿಲ್ಲವಾದ್ದರಿಂದ ಸಮನ್ವಯದ ಕೊರತೆ ಉದ್ಭವಿಸುವುದಿಲ್ಲ.

3) ಹೌದು. ಎರಡೂ ರಸ್ತೆಗಳಲ್ಲಿ ಒಂದಾದ ಕ.ರಾ.ರ.ಸಾ.ಸಂಸ್ಥೆಯ ಬದಿಗಿರುವ ರಸ್ತೆ ಉದ್ದಕ್ಕೂ ಮಳೆ ನೀರನ್ನು ಸಾಗಿಸಲು ಒಳ ಚರಂಡಿ ನಿರ್ಮಿಸುವ ಕೆಲಸ ಪ್ರಗತಿಯಲ್ಲಿದೆ. ಅಂತೆಯೇ ಪಾದಚಾರಿ ಸುರಂಗ ಮಾರ್ಗ ನಿರ್ಮಿಸುವುದು ಹಾಗೂ ಸದರಿ ಪಾದಚಾರಿ ಸುರಂಗ ಮಾರ್ಗದಿಂದ ಬಸ್ ನಿಲ್ದಾಣದಲ್ಲಿ ಹಾಲಿ ಇರುವ ಕಾಲು ಸೇತುವೆಗೆ ಸಂಪರ್ಕ ಕಲ್ಪಿಸುವ ಕೆಲಸವೂ ಸಹ ಪ್ರಗತಿಯಲ್ಲಿದೆ. ಈ ಎರಡೂ ಕೆಲಸಗಳು ಮುಕ್ತಾಯವಾದ ನಂತರ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

4) ಇಲ್ಲ.

5) ಹೌದು. ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಟಿಕೇಟ್ ಪದ್ಧತಿಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಪ್ರವೇಶ ಶುಲ್ಕವು ಒಬ್ಬರಿಗೆ ರೂ. 1.00 ಮಾತ್ರ. ಈ ಯೋಜನೆಯಿಂದ ಪ್ರವೇಶವನ್ನು ನಿರ್ಬಂಧಿಸಿ ಅಧಿಕೃತ ಪ್ರಯಾಣಿಕರ ಅನುಕೂಲಕರ ವ್ಯವಸ್ಥೆಯಾಗಿರುತ್ತದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಟಿಕೇಟ್ ಪದ್ಧತಿಯನ್ನು ಜಾರಿಗೆ ತರುವ ಉದ್ದೇಶ ಇರುವುದಿಲ್ಲ.

ರಾಜ್ಯದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ.

2508(2126)

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲು ಕೈಗೊಂಡಿರುವ ಕ್ರಮಗಳೇನು ಹಾಗೂ ಈ ಕ್ರಮಗಳನ್ನು ಎಂದಿನಿಂದ ಕೈಗೊಳ್ಳಲಾಗಿದೆ.

ಆ) ರೈತರು ಸಾವಯವ ಕೃಷಿಯನ್ನು ರೂಢಿಸಿಕೊಳ್ಳದಿರಲು ಕಾರಣವೇನು;

ಇ) ರಾಜ್ಯದಲ್ಲಿ ಸಾವಯವ ಗೊಬ್ಬರ ತಯಾರಿಸುವ ಸಂಸ್ಥೆಗಳು ಯಾವುವು; ಕಡಿಮೆ